

ದೇವಾಲಯದ ಹೊರ ನೋಟ

# ಗುಹಾಂತರ ದೇಗುಲದ ಹೊಸಗುಡ್ಡ

**ಹೊಸಗುಡ್ಡದ ಮೇಲೆ ಎರಡು ಸುತ್ತಿನ ಕೋಟೆಗಳಿದ್ದು, ಒಳ ಆವರಣದಲ್ಲಿ ಭಕ್ತರು ಹರಕೆ ಹೊತ್ತುಕೊಂಡು ಪೇರಿಸಿಟ್ಟಿರುವ ಕಲ್ಲುಗಳೂ ಹೊಸ ಕಲಾತ್ಮಕ ನೋಟ ಕಟ್ಟಿಕೊಡುತ್ತವೆ. ಆದರೆ ಶಿಥಿಲಗೊಳ್ಳುತ್ತಿರುವ ಈ ಕೋಟೆಗೆ ಮತ್ತು ರಾಮಲಿಂಗೇಶ್ವರ ಗುಹಾಂತರ ದೇಗುಲಕ್ಕೆ ರಕ್ಷಣೆಯ ಅಗತ್ಯವಿದೆ.**

★ಚಿತ್ರ- ಲೇಖನ: **ಚಳ್ಳಕೆರೆ ವೀರೇಶ್**

ಇತಿಹಾಸದ ಮಾತು ಬಂದಾಗಲೆಲ್ಲ ಮೊದಲು ನೆನಪಾಗುವುದು ಚಿತ್ರದುರ್ಗ ಜಿಲ್ಲೆಯೇ. ಇಲ್ಲಿ ಹತ್ತಾರು ಪ್ರಮುಖ ಐತಿಹಾಸಿಕ ಸ್ಥಳಗಳಿವೆ. ಅದೆಷ್ಟೋ ರಾಜ ಮನೆತನಗಳು ನೂರಾರು ವರ್ಷಗಳ ಆಳ್ವಿಕೆ ನಡೆಸಿ ತಮ್ಮದೇ ಆದ ಕುರುಹುಗಳನ್ನು ಬಿಟ್ಟು ಹೋಗಿವೆ. ಈಗ ಅವುಗಳನ್ನು ನೋಡುವ ಜನರು ಇತಿಹಾಸದ ಮಧುರ ಹಾಗೂ ಕಠೋರ ನೆನಪುಗಳನ್ನೆಲ್ಲ ಸಮಾನವಾಗಿ ಆಸ್ವಾದಿಸುತ್ತಿದ್ದಾರೆ.

ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಹೋಬಳಿಯ ರಾಮದುರ್ಗ ಎಂಬ ಪುಟ್ಟ ಗ್ರಾಮದಿಂದ ಸುಮಾರು ಅರ್ಧ ಕಿ.ಮೀ ಕ್ರಮಿಸಿದರೆ ಹೊಸಗುಡ್ಡ ಸಿಗುತ್ತದೆ. ಇಲ್ಲಿರುವ ರಾಮಲಿಂಗೇಶ್ವರ ಗುಹಾಂತರ ದೇವಾಲಯ ಹಳೆಯ ಇತಿಹಾಸದ ನೆನಪುಗಳನ್ನು ಉಕ್ಕಿಸುತ್ತದೆ. ಹೊಸಗುಡ್ಡ ಕೋಟೆಯೊಳಗೆ ಭಾರಿ ಬಂಡೆಯನ್ನು ಕೊರೆದು ನಿರ್ಮಿಸಿರುವ ರಾಮಲಿಂಗೇಶ್ವರ ದೇವಾಲಯ ಮತ್ತು ಅಲ್ಲಿನ ಶಿವನ ವಿಗ್ರಹ ಪ್ರವಾಸಯೋಗ್ಯ ಸ್ಥಳವೇ ಸರಿ. ದೇವಾಲಯದ ಭವ್ಯತೆ ಮನಸೆಳೆಯುವಂತಿದೆ. ಚಿತ್ರದುರ್ಗಕ್ಕೆ ಭೇಟಿ ನೀಡುವ ಬಹುತೇಕ ಯುವಜನ ಈ ಗುಡ್ಡಕ್ಕೂ ಭೇಟಿ ನೀಡುವುದು ಇದೀಗ ಎದ್ದು ಕಾಣುವ ಸಂಗತಿ.

ಇತಿಹಾಸದ ಹಿನ್ನೆಲೆ: ನಾಯಕನಹಟ್ಟಿಯ ಶ್ರೀಗುರುತಿಪ್ಪೇರುದ್ರಸ್ವಾಮಿ ದೇವಾಲಯ ಹಾಗೂ ರಾಮಲಿಂಗೇಶ್ವರ ದೇವಾಲಯವು ಒಂದೇ ರಾಜನ ಆಳ್ವಿಕೆಗೆ ಒಳಪಟ್ಟಿದ್ದು ಎನ್ನಲಾಗುತ್ತಿದೆ. ನಾಯಕನಹಟ್ಟಿಯ ಪಾಳೇಗಾರರಲ್ಲಿ ಒಬ್ಬನಾದ ಬೂದಿಮಲ್ಲಪ್ಪನಾಯಕ ಈ ದೇವಾಲಯದ ನಿರ್ಮಾತೃ ಎಂದು ಹೇಳಲಾಗುತ್ತದೆ.

ನಾಯಕನಹಟ್ಟಿಯ ಪಾಳೇಗಾರರ ಇತಿಹಾಸವೂ ರೋಚಕವಾದದ್ದೇ. ಸೂರದೇವಿ ಹಾಗೂ ಪಾಪನಾಯಕನ ಮಗ ಕಾಕಳನಾಯಕ ಎಂಬವರು ಗೋಸಿಕೆರೆಯಿಂದ ತಮ್ಮ ಕಂಪಳರ 12 ಪೆಟ್ಟಿಗೆ ದೇವರುಗಳೊಂದಿಗೆ ಈಗಿನ ನಾಯಕನಹಟ್ಟಿಗೆ ಬಂದು ನೆಲೆಸಿದರು ಎನ್ನುವುದು ಇತಿಹಾಸ. ಈ ಭಾಗದಲ್ಲಿ